# ಆಸ್ಟ್ರೇಲಿಯಾದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

**ವರದಿ: ಶ್ರೀ: ವಿಜಯಕುಮಾರ್ ಹಲಗಲಿ,ಸಿಡ್ನಿ**

ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಇತ್ತೀಚೆಗೆ ಸಂಘದ ೨೮ನೇಯ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.




ಸಿಡ್ನಿಯ ಡಂಡಾಸ್ ಸಮುದಾಯ ಭವನದಲ್ಲಿ ನಡೆದ ಸಮಾರಂಭದಲ್ಲಿ ಭಾರತದ ಮತ್ತು ಸ್ಥಳೀಯ ಗಣ್ಯರು ಭಾಗವಹಿಸಿದ್ದರು. ಸಮಾರಂಭವು ಕರ್ನಾಟಕದ ನಾಡ ಗೀತೆ " ಜಯ ಭಾರತ ಜನನಿಯ ತನುಜಾತೆ" ಗೀತೆಯನ್ನು ಸಿಡ್ನಿ ಕನ್ನಡ ಸಮುದಾಯದ ಗಾಯಕ ಗಾಯಕಿಯರು ಹಾಡುವದರೊಂದಿಗೆ ಆರಂಭವಾಯಿತು.

ಭಾರತದಿಂದ ಸಮಾರಂಭದ ಅಥಿತಿಗಳಾಗಿ ಆಗಮಿಸಿದ್ದ ಶ್ರೀ ತರಳಬಾಳು ಜಗದ್ಗುರು ಡಾ: ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಕನ್ನಡ ಅಭೀವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ: ಮುಖ್ಯಮಂತ್ರಿ ಚಂದ್ರು, ಶ್ರೀಮತಿ ಪದ್ಮಾ ಚಂದ್ರು, ಸ್ಥಳೀಯ ರಾಜ್ಯ ಸರಕಾರದ ಮೇಲ್ಮನೆಯ ಸ್ಪೀಕರ್ ಶ್ರೀಮತಿ: ಅಮಂಡಾ ಫಾರ್ಳಿಯೊ ಮತ್ತು ಸಿಡ್ನಿ ಕನ್ನಡ ಸಂಘದ ಅಧ್ಯಕ್ಷ ಡಾ: ಸಿದ್ಧಲಿಂಗೇಶ್ವರ ಓರೆಕೊಂಡಿ ಯವರುಗಳು ಸಾಂಪ್ರದಾಯಕ ಜ್ಯೋತಿಯನ್ನು ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು. ಭಾರತದಿಂದ ಬಂದಿದ್ದ ಸಿಡ್ನಿ ಕನ್ನಡ ಸಂಘದ ಪ್ರತಿನಿಧಿ ದೇವತಾ ಬಿಲ್ಡರ್ಸ್ ನ ಶ್ರೀ: ಶ್ರೀಕಂಠ ಆರಾಧ್ಯ ಮತ್ತು ಬೆಂಗಳೂರಿನ ಉದ್ಯಮಿ ಶ್ರೀ: ಆನಂದ್ ಈ ಸಮಯದಲ್ಲಿ ಉಪಸ್ಥಿತರಿದ್ದರು.




ಕಾರ್ಯಕ್ರಮದ ಮುಖ್ಯ ಆಕರ್ಷಣೆ **"ಕೃಷ್ಣನಾ ಕೊಳಲಿನಾ ಕರೆ"** ಎಂಬ ನೃತ್ಯ ನಾಟಕವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ನೃತ್ಯ ನಾಟಕವನ್ನು ಸಿಡ್ನಿಯ ಪ್ರತಿಭಾವಂತ ಕನ್ನಡಿಗ ಡಾ॥ ಸಿಡ್ನಿ ಶ್ರೀನಿವಾಸ್ ನಿರ್ದೇಶಿಸಿ ಪ್ರಸ್ತುತ ಪಡಿಸಿದರು. ಪ್ರತಿಭಾವಂತ ಭರತ ನಾಟ್ಯ ಮತ್ತು ಕಥಕ್ ನೃತ್ಯ ಪಟುಗಳು ಈ ನಾಟಕದ ವಿವಿಧ ಗೀತೆಗಳನ್ನು ತಮ್ಮ ಪ್ರಭುದ್ಧ ಅಭಿನಯದೊಂದಿಗೆ ಪ್ರದರ್ಶಿಸಿ ಸಭಿಕರ ಮನಸೆಳೆದು ಪ್ರಶಂಶೆಗೆ ಪಾತ್ರರಾದರು.








ಸಂಘದ ಹಿರಿಯ ಮಹಿಳಾ ಸದಸ್ಯರುಗಳು ಕರ್ನಾಟಕದ ಜಾನಪದ ಗೀತೆಯನ್ನು ಆದರಿಸಿ ಪ್ರದರ್ಶಿಸಿದ ಕೋಲಾಟವು ಸಭಿಕರಿಂದ ಚಪ್ಪಾಳೆ ಗಿಟ್ಟಿಸಿತು. ಸಂಘದ ಅಧ್ಯಕ್ಷ ಡಾ॥ ಓರೆಕೊಂಡಿಯವರು ಸಂಘದ ಕಾರ್ಯಕ್ರಮಗಳು ಮತ್ತು ಸಾಧನೆಗಳನ್ನು ವಿವರಿಸಿದರು ಮತ್ತು ಅಥಿತಿಗಳನ್ನು ಸ್ವಾಗತಿಸಿ ಸಭಿಕರಿಗೆ ಪರಿಚಯಿಸಿದರು. ಶ್ರೀಮತಿ॥ ಅಮಂಡಾ ಫಾರ್ಳಿಯೊ ಮಾತನಾಡಿ ಕನ್ನಡಿಗರು ಮತ್ತು ಎಲ್ಲ ಭಾರತೀಯರು ತಮ್ಮ ಶ್ರೀಮಂತ ಕಲೆ ಮತ್ತು ಆದರ್ಶಪ್ರಾಯ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಬರುವುದರ ಜೊತೆಗೆ ಆಸ್ಟ್ರೇಲಿಯದ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿರುವದನ್ನು ಶ್ಲಾಘಿಸಿದರು.

   

ಶ್ರೀ ಮುಖ್ಯಮಂತ್ರಿ ಚಂದ್ರುರವರು ಸಿಡ್ನಿ ಕನ್ನಡಿಗರನ್ನು ಉದ್ದೇಶಿಸಿ ಮಾತನಾಡಿ, ಕನ್ನಡ ಪ್ರಾಧಿಕಾರದ ಕಾರ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಿದರು. ಕನ್ನಡ ಭಾಷೆಯ ಬೆಳವಣಿಗೆಗೆ ಮತ್ತು ಕನ್ನಡ ಭಾಷೆಯನ್ನು ಮಕ್ಕಳಿಗೆ ಕಲಿಸಲು ಬೇಕಾದ ಎಲ್ಲ ಸೌಲಭ್ಯಗಳನ್ನು ಮತ್ತು ಸರಕಾರದಿಂದ ದೊರಕುವ ಸಹಾಯವನ್ನು ಸಿಡ್ನಿ ಕನ್ನಡ ಸಂಘಕ್ಕೆ ದೊರಕಿಸಿಕೊಡಲು ಶ್ರಮಿಸುವುದಾಗಿ ಹೇಳಿದರು.

 

ತರಳಬಾಳು ಶ್ರೀಗಳು ಮಾತನಾಡಿ ಕನ್ನಡಿಗರನ್ನು ರಂಗನತಿಟ್ಟಿಗೆ ಭೇಟಿ ನೀಡುವ ಪರದೇಶದ ಹಕ್ಕಿಗಳಿಗೆ ಹೋಲಿಸಿದರು ಮತ್ತು ತಾಯ್ನಾಡನ್ನು ಮರೆಯಲಾಗದ ಮತ್ತು ವಲಸೆ ಬಂದ ನಾಡನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲೂ ಆಗದ ದ್ವಂದ್ವ ಮನಸ್ಥಿತಿಗೆ ಸಂತಾಪ ವ್ಯಕ್ತಪಡಿಸಿದರು. ಹೊರದೇಶಕ್ಕೆ ವಲಸೆ ಬಂದ ಭಾರತೀಯರ ಇಕ್ಕಟ್ಟಿಗೆ ಸಿಲುಕಿದ ಮನಸ್ಥಿತಿಯನ್ನು ವಚನವೊಂದನ್ನು ಉದಾಹರಿಸಿ ನಡು ನೀರಿನಲ್ಲಿ ತೇಲಲು ಬಿಡದ ಕಾಲಿಗೆ ಕಟ್ಟಿದ ಕಬ್ಬಿಣದ ಗುಂಡು ಮತ್ತು ಮುಳುಗಲು ಬಿಡದ ಕೊರಳಿಗೆ ಕಟ್ಟಿದ ಬೆಂಡು ಉಂಟು ಮಾಡುವ ಅತಂತ್ರ ಸ್ಥಿತಿಗೆ ಹೋಲಿಸಿದರು. ಪರದೇಶದಲ್ಲಿದ್ದರೂ ಕನ್ನಡ ಭಾಷೆ ಮತ್ತು ಕಲೆಗಳನ್ನು ಪೋಷಿಸುವ ಪ್ರಯತ್ನವನ್ನು ಮೆಚ್ಚಿದರು.

 

ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರಿಗೆ ಶ್ರೀ ಮುಖ್ಯಮಂತ್ರಿ ಚಂದ್ರು ಪ್ರಮಾಣ ಪತ್ರಗಳನ್ನು ನೀಡಿದರು.
ಕನ್ನಡ ಸಂಘದ ಸಂಸ್ಥಾಪಕ ಸದಸ್ಯರಾಗಿ ಇಲ್ಲಿಯವರೆಗೆ ಅವಿರತವಾಗಿ ದುಡಿಯುತ್ತಿರುವ ಹೆಮ್ಮೆಯ ಸದಸ್ಯರೊಬ್ಬರನ್ನು ಈಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷರಾಗಿ, ಏಷಿಯ ಪೆಸಿಫಿಕ್ ಸಂಚಾಲಕರಾಗಿ, ಸಿಡ್ನಿಯ ಕನ್ನಡ ಬಾನುಲಿ ಕಾರ್ಯಕ್ರಮದ ಪ್ರಯೋಜಕರಾಗಿ ಮತ್ತು ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಕನ್ನಡದ ಮತ್ತು ಕನ್ನಡಿಗರಿಗಾಗಿ ಸೇವೆ ಸಲ್ಲಿಸಿದ , ಸಲ್ಲಿಸುತ್ತಿರುವ ಶ್ರೀ: ಓಂಕಾರಸ್ವಾಮಿ ಗೊಪ್ಪೆನಳ್ಳಿಯವರ ಸೇವೆಯನ್ನು ಸ್ಮರಿಸಿ, ಅವರಿಗೆ ಶ್ರೀಗಳಿಂದ ಶಾಲು ಹೊದಿಸಿ ಮತ್ತು ಫಲಕ ನೀಡಿ ಗೌರವಿಸಲಾಯಿತು.
ರಾತ್ರಿಯ ಭೋಜನದ ನಂತರ ಮಾತನಾಡಿದ ಶ್ರೀ ಮುಖ್ಯಮಂತ್ರಿ ಚಂದ್ರು ಅವರು ತಮ್ಮ ಹಾಸ್ಯ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದರು. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಮಾತನಾಡುವ ಬೇರೆ ಬೇರೆ ಕನ್ನಡ ಭಾಷೆಯ ಪ್ರಕಾರಗಳು ಹೇಗೆ ಗೊಂದಲಮಯ

ಪ್ರಸಂಗಗಳನ್ನು ನಿರ್ಮಿಸುತ್ತವೆ ಎಂದು ಹಾಸ್ಯಮಯವಾಗಿ ನಿಜ ಜೀವನದಲ್ಲಿ ನಡೆದ ಸತ್ಯ ಘಟನೆಗಳನ್ನು ಆದರಿಸಿ ವಿವರಿಸಿದರು. ಶ್ರೀ ಚಂದ್ರು ಅವರು ಸರಳವಾಗಿ ಸುಲಲಿತವಾಗಿ ಬಹು ವೇಗವಾಗಿ ಕನ್ನಡವನ್ನು ಮಾತನಾಡುವ ಹಾಸ್ಯ ಲಹರಿಯನ್ನು ಕೇಳುತ್ತ ಮೈಮರೆತ ಸಿಡ್ನಿ ಕನ್ನಡಿಗರಿಗೆ ಸಮಯ ಸರಿದುದು ತಿಳಿಯಲೇ ಇಲ್ಲ.

ಕಾರ್ಯಕ್ರಮದ ನಿರ್ವಹಣೆಯನ್ನು ಡಾ|| ಸಿಡ್ನಿ ಶ್ರೀನಿವಾಸ್ ಮತ್ತು ಶ್ರೀಮತಿ|| ಶುಭಶ್ರೀ ನಿಭಾಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷ ಶ್ರೀ|| ವಿಜಯಕುಮಾರ್ ಹಲಗಲಿ ವಂದನಾರ್ಪಣೆ ಮಾಡಿದರು.





















**Phots by Mr Sam Gopinath and Sandhya Goppenalli**

www.kannada.org.au